ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ 110

ಅದರಲ್ಲಿ ಸ್ವಂತ ಕಟ್ಟಡಗಳಲ್ಲಿ 5 ಅಂಗನವಾಡಿ ಕೇಂದ್ರಗಳು, ಬಾಡಿಗೆ ಕಟ್ಟಡಗಳಲ್ಲಿ 23 ಅಂಗನವಾಡಿ ಕೇಂದ್ರಗಳು, ಸಮುದಾಯ ಭವನದಲ್ಲಿ 25, ಯುವಕ ಸಂಘದಲ್ಲಿ 9, ಮಹಿಳಾ ಮಂಡಲಿ 9, ದೇವಸ್ಥಾನ 37, ಮತ್ತು ಶಾಲೆಯ 2 ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಆ) ಬಾಡಿಗೆ ಕಟ್ಟಡದಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಕಟ್ಟಲು ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಾಯಧನ

1414 (1916) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗನವಾಡಿ ಸಹಾಯಕರ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಅಂಗನವಾಡಿ ಸಹಾಯಕರಿಗೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುವ ಮಾಶಾಸನ ಹೆಚ್ಚಿಗೆ ಮಾಡುವುದು ಸರ್ಕಾರದ ಗಮನದಲ್ಲಿದೆಯೇ?

ಇ) ಇದ್ದಲ್ಲಿ ಯಾವ ವರ್ಷದಿಂದ ಮಾಶಾಸನ ಹೆಚ್ಚಿಗೆ ಮಾಡಲಾಗುವುದು?

ಶ್ರೀಮತಿ. ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಮಂಜೂರಾಗಿರುವ ಅಂಗನವಾಡಿ ಸಹಾಯಕರ ಸಂಖ್ಯೆ 40301 ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ 40301 (ಜಿಲ್ಲಾ ವಾರು ವಿವರವನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ)

ಆ) ಅಂಗನವಾಡಿ ಸಹಾಯಕರಿಗೆ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಗೆ ಮಾಡುವ ಬಗ್ಗೆ ಸರಕಾರದ ಪರಿಶೀಲನೆಯಲ್ಲಿ ಇರುತ್ತದೆ.

ಇ) ಈ ಬಗ್ಗೆ ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1916

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮಂಜೂರಾದ ಅಂಗನವಾಡಿ ಕಾರ್ಯಕರ್ತೆ: ಸಹಾಯಕಿಯರ ಸಂಖ್ಯೆ
1	ಬಾಗಲಕೋಟೆ	1366
2	ಬೆಂಗಳೂರು (ಗ್ರಾ)	1891
3	ಬೆಂಗಳೂರು (ನ)	1192
4	ಬೆಳಗಾಂ	3773
5	ಬಳ್ಳಾರಿ	1372
6	ಬೀದರ್	1151
7	ಬಿಜಾಪುರ	1301
8	ಚಾಮರಾಜಪೇಟೆ	1085
9	ಚಿಕ್ಕಮಗಳೂರು	1226
10	ಚಿತ್ರದುರ್ಗ	1336
11	ದಕ್ಷಿಣ ಕನ್ನಡ	1775
12	ದಾವಣಗೆರೆ	1262
13	ಧಾರವಾಡ	806
14	ಗದಗ	835
15	ಗುಲ್ಬರ್ಗ	2350
16	ಹಾಸನ	1603
17	ಹಾವೇರಿ	1249
18	ಕೊಡಗು	692
19	ಕೋಲಾರ	2361
20	ಕೊಪ್ಪಳ	893
21	ಮಂಡ್ಯ	1655
22	ಮೈಸೂರು	1930

1	2	3
23	ರಾಯಚೂರು	1308
24	ಶಿವಮೊಗ್ಗ	1323
25	ತುಮಕೂರು	2337
26	ಉಡುಪಿ	1027
27	ಉತ್ತರ ಕನ್ನಡ	1202

ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶುವೈದ್ಯ ಕಾಲೇಜಿನ ಆಸ್ಪತ್ರೆಗಳಲ್ಲಿ ಸಲಕರಣೆ ಯಂತ್ರೋಪಕರಣಗಳ ಖರೀದಿ

1416 (1205) - ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಎ) ಬೆಂಗಳೂರು ಹೆಬ್ಬಾಳದಲ್ಲಿರುವ ಪಶುವೈದ್ಯ ಕಾಲೇಜಿನ ಆಸ್ಪತ್ರೆಯಲ್ಲಿ ಲಭ್ಯವಿರುವ ಸಲಕರಣೆ, ಯಂತ್ರೋಪಕರಣ, ಸಂಶೋಧನೆಗೆ ಬೇಕಾದ ಸಾಮಗ್ರಿಗಳು ಯಾವುವು?

(ಬಿ) ಅವುಗಳನ್ನು ಯಾವ ಸಾಲಿನಲ್ಲಿ ಖರೀದಿಸಲಾಗಿದೆ ಹಾಗೂ ತಗಲಿದ ವೆಚ್ಚವನ್ನು (ಖರೀದಿ ಮತ್ತು ಯಂತ್ರಗಳ ವಿವರ ಒದಗಿಸುವುದು)

(ಸಿ) ಈ ಆಸ್ಪತ್ರೆಯಲ್ಲಿ ಆತ್ಯಾಧುನಿಕ ಸಾಮಗ್ರಿಗಳು ಇಲ್ಲದಿರುವುದು ನಿಜವಲ್ಲವೇ?

(ಡಿ) ಹಾಗಿದ್ದಲ್ಲಿ ಇದುವರೆವಿಗೂ ಈ ಆಸ್ಪತ್ರೆಯನ್ನು ಆಧುನೀಕರಣಗೊಳಿಸದಿರಲು ಕಾರಣಗಳೇನು?

(ಇ) ಈ ಸಂಸ್ಥೆಯನ್ನು ಗಣಕೀಕರಣಗೊಳಿಸಲಾಗಿದೆಯೇ?

(ಎಫ್) ಗೊಳಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು):

(ಎ) ವಿವರಗಳನ್ನು ಅನುಬಂಧ -1 ರಲ್ಲಿ ಒದಗಿಸಲಾಗಿದೆ.

(ಬಿ) ಒದಗಿಸಲಾಗಿದೆ.

(ಸಿ) ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಒಟ್ಟು ಐದು ವಿಭಾಗಗಳಲ್ಲಿ ಸರ್ಜರಿ ಮತ್ತು ಕ್ಲಿನಿಕಲ್ ಮೆಡಿಸಿನ್ ವಿಭಾಗಗಳಲ್ಲಿ ಕೆಲವು ಆತ್ಯಾಧುನಿಕ ಸಾಮಗ್ರಿಗಳಿವೆ.

(ಡಿ) ಪಶುವೈದ್ಯ ಕಾಲೇಜಿಗೆ ಅಗತ್ಯವಾದ ಸಲಕರಣೆ, ಯಂತ್ರೋಪಕರಣಗಳು, ಔಷಧ ಸಾಮಗ್ರಿಗಳು ಮತ್ತು ಅಗತ್ಯ ತಾಂತ್ರಿಕ, ಅರೆ ತಾಂತ್ರಿಕ ಮತ್ತು ಸಹಾಯಕ ಸಿಬ್ಬಂದಿಯನ್ನು ಒದಗಿಸಲಾಗಿದೆ. ಹಣಕಾಸಿನ ಲಭ್ಯತೆಗಳನುಗುಣವಾಗಿ ಆಧುನೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.